ದಿನಾಂಕ **:13.11.2024** ರಂದು ಪಿಡಬ್ಲ್ಯೂ - 2 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಮುಂದುವರಿದ ಪಾಟೀ ಸವಾಲುಃ</u> ಶ್ರೀ ಎಂ.ಕೆ.ವಿ.ಕೆ. 1 ನೇ ಪ್ರತಿವಾದಿ ಪರ ವಕೀಲರಿಂದಃ

ಸಾಣೂರಿನ ಸರ್ವೆ ನಂಬ್ರ 83/7, ಸರ್ವೆ ನಂಬ್ರ 83/8, ಸರ್ವೆ ನಂಬ್ರ 83/1 (1 ಭಾಗ), 83/13 ಮತ್ತು ಸರ್ವೆ ನಂಬ್ರ 318 ಇವುಗಳಿಗೆ ಸಂಬಂಧಿಸಿದಂತೆ, ಭೂ ನ್ಯಾಯ ಮಂಡಳಿಯಲ್ಲಿ ಈಗಲೂ ವಿಚಾರಣೆ ನಡೆಯುತ್ತಿರುವ ವಿಚಾರ ನನಗೆ ತಿಳಿದಿಲ್ಲ. 1 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ತಿಳಿದುಕೊಂಡಿಲ್ಲ. ಮೂಡಬಿದ್ರೆಯಲ್ಲಿ ನಡೆಯುತ್ತಿರುವ ಅಸಲು ದಾವೆ 155/2019 ನ್ನು ನಾನು, ನನ್ನ ತಾಯಿ ಹಾಗೂ 2 ರಿಂದ 5 ನೇ ಪ್ರತಿವಾದಿಯರು ಸೇರಿ ವಾದಿಯರು ಸದರಿ ದಾವೆಯನ್ನು ಸಲ್ಲಿಸಿದ್ದೇವೆ. ಅಸಲು ದಾವೆ 219/2020 ನ್ನು 1 ನೇ ಪ್ರತಿವಾದಿಯು ನಮ್ಮೆಲ್ಲರ ವಿರುದ್ಧ ಮೂಡಬಿದ್ರೆಯಲ್ಲಿ ಸಲ್ಲಿಸಿದ್ದು, ಅದರಲ್ಲಿ ನಮ್ಮೆಲ್ಲರದ್ದು ಒಂದೇ ಸಾಧನೆಯಾಗಿರುತ್ತದೆ. ಕ್ರಿಮಿನಲ್ ಪ್ರಕರಣದಲ್ಲೂ ನಾನು ಮತ್ತು 2 ರಿಂದ 5 ನೇ ಪ್ರತಿವಾದಿಯರು ಆರೋಪಿತರಾಗಿದ್ದೇವೆ ಎಂದರೆ ಸರಿ. ಕ್ರಿಮಿನಲ್ ಪ್ರಕರಣದಲ್ಲಿ ನಮ್ಮೆಲ್ಲರಿಗೂ ಒಬ್ಬರೇ ವಕೀಲರು. 4 ನೇ ಪ್ರತಿವಾದಿ ಒಪ್ಪದ ಕಾರಣ, ನಾವೆಲ್ಲರೂ ರಾಜಿಯಾಗಿದ್ದರೂ ಸಹಾ ಈ ದಾವೆಯನ್ನು ರಾಜಿ ಮಾಡಿಕೊಳ್ಳಲು ಒಪ್ಪುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬೆಳ್ತಂಗಡಿ ನ್ಯಾಯಾಲಯದಲ್ಲಿರುವ ಸ್ವತ್ತುಗಳಿಗೂ ಮತ್ತು ಈ ದಾವಾ

ಸ್ವತ್ತುಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯು ತಪ್ಪು ತಿಳುವಳಿಕೆಯಿಂದ ಮಾಡಿರುವ ದಾವೆಯಾಗಿರುತ್ತದೆ ಎಂದರೆ ಸರಿಯಲ್ಲ. ಜಿನ್ನಪ್ಪ ಹೆಗ್ಗಡೆಯವರು ಮರಣ ಹೊಂದಿದ ನಂತರ ಅವರ ಗಂಡು ಮಕ್ಕಳಿಗೆ ಮಾತ್ರ ಸ್ವತ್ತುಗಳು ಬರತಕ್ಕದ್ದು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಜಿ.ಎಂ.ಬಿ. 7 ನೇ ಪ್ರತಿವಾದಿ ಪರ ವಕೀಲರಿಂದಃ

ಬೆಳುವಾಯಿ ಗ್ರಾಮದ ಸರ್ವೆ ನಂಬ್ರ 384 ರಲ್ಲಿ 4 ಎಕರೆ 80 ಸೆಂಟ್ಸ ಸ್ವತ್ತು ಯಾವುದು ಎಂದು ನನಗೆ ಗೊತ್ತಿದೆ. ಈಗ ನನಗೆ ಸದರಿ ಸ್ವತ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು ತೋರಿಸಿದ್ದು, ಅದನ್ನು ಈಗಾಗಲೇ ನಿಪಿ - 27 ಎಂದು ಗುರುತಿಸಲಾಗಿದೆ. ಸದರಿ ಸ್ವತ್ತಿನಲ್ಲಿ 1 ಮತ್ತು 7 ನೇ ಪ್ರತಿವಾದಿಗೆ ಮಾತ್ರ ಹಕ್ಕು ಇದ್ದು, ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸುತ್ತಲೂ ಅಗಳು ಇರುತ್ತದೆ ಎಂದರೆ ಎರಡು ಬದಿ ಮಾತ್ರ ಅಗಳು ಇರತ್ತದೆ. ಸದರಿ ಸ್ವತ್ತು 7 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಏನೇನು ಅಭಿವೃದ್ಧಿ ಮಾಡಲಾಗಿದೆ ಎಂದು ನಾನು ನೋಡಿರುವುದಿಲ್ಲ. ಸ್ವತ್ತಿನ ಸುತ್ತಲೂ ಅಗಳನ್ನು 7 ನೇ ಪ್ರತಿವಾದಿಯು ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿ 2008 ನೇ ಇಸವಿಯಲ್ಲಿ ಸದರಿ ಸ್ವತ್ತನ್ನು ಖರೀದಿ ಮಾಡಿ, ಸುತ್ತಲೂ ಅಗಳು ಹಾಕಿ, ಹೇರಳವಾದಂತಹ ಅಭಿವೃದ್ದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು ಖರೀದಿಸಿರುವ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರದ ಕಾರಣ, ಸದರಿ ಖರೀದಿ ಪತ್ರವು ಸರಿ ಇರುವುದಿಲ್ಲ ಎಂದು ತಿಳಿಸಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವು 2008 ರಲ್ಲಿ

ಆಗಿದೆ ಎಂದು ನನಗೆ 2008 ರಲ್ಲಿ ತಿಳಿದಿತ್ತು ಎಂದರೆ ಸರಿಯಲ್ಲ. ನನಗೆ ಸ್ವತ್ತಿನಲ್ಲಿ ಪಾಲು ಬೇಕು ಎಂದು ಕೇಳಿದಾಗ ಕ್ರಯವಾಗಿರುವ ವಿಚಾರ ನನಗೆ ತಿಳಿದಿರುತ್ತದೆ. 2008 ರಲ್ಲಿ ಸ್ವತ್ತನ್ನು 7 ನೇ ಪ್ರತಿವಾದಿಯು ಖರೀದಿ ಮಾಡಿರುವ ವಿಚಾರ ಮತ್ತು ಅದರಲ್ಲಿ ಅಭಿವೃದ್ಧಿ ಮಾಡಿರುವ ವಿಚಾರ ನನಗೆ 2008 ರಲ್ಲಿ ತಿಳಿದಿದ್ದರೂ ಸಹಾ ದಾವಾ ಕಾರಣಕ್ಕಾಗಿ ದಾವೆ ಹಾಕುವ ಸಮಯದಲ್ಲಿ ತಿಳಿದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಿಂದೆ ನನ್ನನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಎಲ್ಲರ ಹೆಸರು ಪಾಂಡೆ ಎಂದು ನಮೂದಾಗಿದ್ದು, ಅವರ ನಿಜವಾದ ಹೆಸರುಗಳು ಪಾಂಡಿ ಎಂದರೆ ಸರಿ. ಅಲ್ಲದೇ ದಿನರಾಜ ಪಾಂಡಿ ಎಂದು ತಪ್ಪಾಗಿ ನಮೂದಾಗಿದ್ದು, ಅದನ್ನು ಜಿನರಾಜ ಪಾಂಡಿ ಎಂದು ಹಾಗೂ ಐದೊಟ್ಟು ಎಂದು ತಪ್ಪಾಗಿ ನಮೂದಾಗಿದ್ದು, ಅದನ್ನು ಸರಿಯಾಗಿ ಐದು ಒಕ್ಕಲು ಎಂದು ಪರಿಗಣಿಸಬೇಕಾಗಿದೆ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.

**PW2**